

## ಆವಾಸಸ್ಥಾನಗಳ ರಕ್ಷಣೆಯೇ ನೈಜ ಸವಾಲು

ಸಂರಕ್ಷಿತ ಪ್ರದೇಶಗಳಲ್ಲಿ ಆನೆಗಳ ಪೋಷಣೆ ಚೆನ್ನಾಗಿಯೇ ನಡೆಯುತ್ತಿದೆ. ಅಲ್ಲದೆ, ಅವುಗಳ ಸಂತತಿ ಕೂಡ ಬೆಳೆಯುತ್ತಿರುವಂತೆ ಕಾಣುತ್ತದೆ. ವೈಜ್ಞಾನಿಕವಾಗಿ ದೃಢೀಕರಿಸುವಂತಹ ಮಾಹಿತಿಯಿಲ್ಲದೆ ಆನೆಗಳ ಸಂಖ್ಯೆ 'ನಿಖರವಾಗಿ ಇಷ್ಟು ಹೆಚ್ಚಾಗಿದೆ' ಎಂಬುದನ್ನು ನಂಬುವುದು ಕಷ್ಟ. ಬಹುತೇಕ ಆನೆಗಳ ಆವಾಸಸ್ಥಾನದಲ್ಲಿ ಗಣತಿಗೆ ಅಂತಹ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಲಾಗಿಲ್ಲ ಎನ್ನುವುದು ಕೂಡ ನಿಜ. ಆನೆಗಳ ಸಂರಕ್ಷಿತ ಕಾಡು ಹೊರತುಪಡಿಸಿ ಮಿಕ್ಕ ಪ್ರದೇಶಗಳಲ್ಲಿ ಸಹ ಅವುಗಳ ಆವಾಸಸ್ಥಾನ ದೊಡ್ಡ ಪ್ರಮಾಣದಲ್ಲೇ ಇದೆ ಎಂಬುದನ್ನು ಮರೆಯುವಂತಿಲ್ಲ. ಅಂದಹಾಗೆ, ಗಜಪಡೆ ಸದ್ಯ ಹೆಚ್ಚಿನ ಗಂಡಾಂತರ ಎದುರಿಸುತ್ತಿರುವುದು ಇಂತಹ ಪ್ರದೇಶಗಳಲ್ಲೇ. ಮಾನವ–ಆನೆ ಸಂಘರ್ಷಗಳು ಸಹ ಈ ಪ್ರದೇಶಗಳಲ್ಲಿ ಸಾಮಾನ್ಯವಾಗಿವೆ. ಸಂರಕ್ಷಿತ ಕಾಡುಗಳಿಗೆ ಹೊರತಾದ ಪ್ರದೇಶಗಳ ಆನೆಗಳ ರಕ್ಷಣೆಯೇ ಮುಂದಿರುವ ನಿಜವಾದ ಸವಾಲು.

ಮಾನವ–ಆನೆ ಸಂಘರ್ಷಕ್ಕೆ ಇದೇ ಅತ್ಯುತ್ತಮ ಪರಿಹಾರ ಎಂದು ಯಾವುದೋ ಒಂದು ಸೂತ್ರವನ್ನು ಮುಂದಿಡಲು ಸಾಧ್ಯವಿಲ್ಲ. ತಾತ್ಕಾಲಿಕ ಪರಿಹಾರೋಪಾಯಗಳು ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದಂತೆ. ಆನೆಗಳ ಸಹಜ ಬದುಕಿಗೆ ಎಂತಹ ವಾತಾವರಣ ಕಟ್ಟಿಕೊಡಬೇಕು ಎಂಬುದನ್ನು ಯೋಜಿಸಬೇಕಿದೆ. ಅದಕ್ಕಾಗಿ ಕಾಡಿನ ಭೂಬಳಕೆಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅಗತ್ಯವಾಗಿದೆ. ಅಂದರೆ ಆನೆಗಳ ಜಾಗವನ್ನು ಅವುಗಳಿಗೆ ಬಿಟ್ಟುಕೊಡಬೇಕು. ಅವುಗಳ ವರ್ತನೆ ಕುರಿತು ಜನರಲ್ಲೂ ಅರಿವು ಮೂಡಿಸಬೇಕು.

–ವರುಣ್ ಆರ್. ಗೋಸ್ವಾಮಿ, ಹಿರಿಯ ವೈಜ್ಞಾನಿಕ ಸಲಹೆಗಾರ, ಭಾರತೀಯ ವನ್ಯಜೀವಿ ಸಂರಕ್ಷಣೆ ಸೊಸೈಟಿ ಹಾಗೂ ಆನೆಗಳ ವಿಷಯತಜ್ಞ

ಚಿತ್ರ: ವಿಶ್ವನಾಥ ಸುವರ್ಣ